

ದಸರೆ ಸಂದರ್ಭದಲ್ಲಿ ಮಂಗಳೂರಿನಲ್ಲಿ ಹುಲಿವೇಷಧಾರಿಗಳ ಸಂಭ್ರಮ
ಚಿತ್ರ: ಇರ್ಷಾದ್ ಮಹಮ್ಮದ್



ನವರಾತ್ರಿ ಪ್ರಯುಕ್ತ ಹುಬ್ಬಳ್ಳಿಯ ಕಮರಿಪೇಟೆಯಲ್ಲಿ ಏರ್ಪಡಿಸಿದ್ದ 'ಟಗರು ಕಾಳಗ'
ಚಿತ್ರ: ಗೋವಿಂದರಾಜ ಜವಳಿ

### ಶಾಕ್ತ-ಕೌಳ ಪಂಥಗಳ ಚಾರಿತ್ರಿಕತೆ

ದಸರಾ ಮಾತೃ ಸಂಸ್ಕೃತಿಯ ಸಂಘರ್ಷವನ್ನು ದಾಖಲಿಸುವ ಶಾಕ್ತಪಂಥದ ಆಚರಣೆಗಳ ಗುರುತಾಗಿದೆ. ಶಾಕ್ತ ಪರಂಪರೆಯಲ್ಲಿ ಬೇವು, ಬನ್ನಿ, ಲಕ್ಕಿ, ಹೊನ್ನವರಿಕೆಗಳು ಮಹತ್ವದ ಸ್ಥಾನ ಪಡೆದಿವೆ. ಬನ್ನಿಮಾಂಕಾಳಿ ವಿಶೇಷವಾಗಿ ನವರಾತ್ರಿಯಲ್ಲಿ ಪೂಜೆಗೊಳ್ಳುತ್ತಾಳೆ. ಗೊಂದಲಿಗ ಸಮುದಾಯದ ಬನ್ನಿಪೂಜೆ ಅವರ ಸಾಂಸ್ಕೃತಿಕ ಗುರುತಾಗಿದೆ. ಬನದ ಬನ್ನಿಗಿಡದ ಆರಾಧನೆಯನ್ನೇ ಚುಂಚೂರ ಮಾಪುರದ ತಾಯಿಯೆಂದು ಆರಾಧಿಸುತ್ತಾರೆ. ಎಲ್ಲಮ್ಮನನ್ನು ಜೋಗತಿ ಪರಂಪರೆಯಲ್ಲಿ 'ಬನ್ನಿಯ ಮರದಾಕಿ' ಎಂದು ಕರೆಯುತ್ತಾರೆ. ಹಾಗೆ ನೋಡಿದರೆ ಸಸ್ಯಜಗತ್ತಿನಲ್ಲಿ ಲಕ್ಕಿ, ಬೇವು, ಎಕ್ಕೆಗಳನ್ನು ರೋಗಕ್ಕೆ ಮದ್ದನ್ನಾಗಿಯೂ ಬಳಸುತ್ತಾರೆ. ವಿಶೇಷವಾಗಿ ಈ ಗಿಡಗಳು ಫಲವಂತಿಕೆಯ ಗುಣದಿಂದಲೂ ಆರಾಧನೆಗೊಳ್ಳುತ್ತಿವೆ.

ಮಕ್ಕಳಾಗದ ಹೆಣ್ಣುಮಕ್ಕಳು ನವರಾತ್ರಿಯಲ್ಲಿ ಬನ್ನಿ ಮರಕ್ಕೆ ಸೂರ್ಯ ಹುಟ್ಟುವ ಮೊದಲು ಸ್ನಾನ ಮಾಡಿ ಹಸಿ ಮೈಯಲ್ಲೇ ಪೂಜೆ ಮಾಡಿಕೊಂಡು ಬರುವುದು ಇದನ್ನು ಸೂಚಿಸುತ್ತದೆ. ಮದುವೆ ಆಗದ ಹುಡುಗಿಯರು ಮದುವೆ ಬೇಗ ಆಗಲಿ ಎಂದೂ ಪೂಜಿಸುತ್ತಾರೆ. ಇದು ನವರಾತ್ರಿಯ ಸಂದರ್ಭದ ಪೂಜೆಗೂ ಫಲವಂತಿಕೆಯ ಆಚರಣೆಗೂ ಒಂದು ಸಂಬಂಧವನ್ನು ಕಲ್ಪಿಸುತ್ತದೆ. ಶಕ್ತಿಯ ಹೆಸರಿನ ನವರಾತ್ರಿಗೂ ಮಗುವಿನ ಜನನಕ್ಕೆ ಬೇಕಾಗುವ 'ನವಮಾಸ'ಕ್ಕೂ ಸಂಬಂಧವಿದೆ. ನವರಾತ್ರಿಗಳಲ್ಲಿ ಉತ್ತರ ಭಾರತದಲ್ಲಿ ಏರ್ಪಡುವ 'ಗರ್ಭಾ ನೃತ್ಯ'ವೂ ಇದನ್ನೇ ಸಂಕೇತಿಸುತ್ತದೆ. ಶಾಕ್ತ ಆರಾಧನೆಯಲ್ಲಿ ಗರ್ಭಧಾರಣೆ, ಕೂಸಿನ ಹುಟ್ಟು, ಅದರ ಪೋಷಣೆಯ ಹಿನ್ನೆಲೆಯಲ್ಲಿ ಹಲವು ಆಚರಣೆಗಳು ಇರುವುದನ್ನು ಗಮನಿಸಬಹುದಾಗಿದೆ.

ಶಾಕ್ತಪಂಥದ ಜತೆ ದಸರಾ ಬೇರುಗಳನ್ನು ಹೊಂದಿದಂತೆ ಕರ್ನಾಟಕದ ಆದಿಮ ಪಂಥ ಕೌಳದ ಜತೆಗೂ ಒಂದು ಸಂಬಂಧ ಹೊಂದಿದೆ. ಕೌಳರು ಚಂಡಿಯ ಆರಾಧಕರು. 'ಶಂಕರದಾಸಿಮಯ್ಯ ಪುರಾಣ'ದ (16ನೇ ಶತಮಾನ) ಪ್ರಕಾರ, ಕೌಳರು ಮಾಕಾಳಿಗೆ ಪ್ರಾಣಿಬಲಿ ಕೊಡುತ್ತಿದ್ದರು. ಕೌಳಸಾಧನೆಯ ಭಾಗವಾಗಿ ಮಾಂಸ–ಮದ್ಯ